# ಕೊಡಿರಿ

‘ಕೊಡಿರಿ’ ಬಗ್ಗೆ ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು
## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಒಟ್ಟಿಗೆ ಪ್ರಾರ್ಥನೆಯೊಂದಿಗೆ ಆರಂಭಿಸಿರಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ.
ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಕೊನೆಯ ಬಾರಿಗೆ ಸುವಾರ್ತೆ ಅಥವಾ ಕಥೆಯನ್ನು ಯಾರೊಂದಿಗೂ ಹಂಚಿಕೊಂಡಿದ್ದೀರಾ?
- ನೀವು ಪ್ರತಿದಿನ ಸತ್ಯವೇದವನ್ನು ಓದಿದ್ದೀರಾ ಅಥವಾ ಕೇಳಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸಿದ್ದೀರಿ?
- ನೀವು ಇತರರನ್ನು ಪ್ರೀತಿಸಲು ಉದ್ದೇಶಪೂರ್ವಕವಾಗಿ ಹೆಜ್ಜೆಗಳನ್ನು ತೆಗೆದುಕೊಂಡಿದ್ದೀರಾ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಿಗೆ ಸತ್ಯವೇದದ ಅಧ್ಯಯನ ಮಾಡುವುದರ ಮೂಲಕ ‘ಕೊಡುವುದರ’ ವಿಷಯವಾಗಿ ಮಾಡುವ ಯೇಸುವಿನ ಆಜ್ಞೆಯ ಬಗ್ಗೆ ಕಲಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿ ಮತ್ತು ನಿಜವಾದ ಕಥೆಯನ್ನು ಚರ್ಚಿಸಿ ಅದು ವಿಧೇಯತೆ ಹೇಗಿರಬಹುದು ಎಂಬುದನ್ನು ವಿವರಿಸುತ್ತದೆ.

ಲೂಕ 6:37–38:

> ಇದಲ್ಲದೆ ತೀರ್ಪುಮಾಡಬೇಡಿರಿ, ಆಗ ನಿಮಗೂ ತೀರ್ಪಾಗುವುದಿಲ್ಲ; ಅಪರಾಧಿಗಳೆಂದು ನಿರ್ಣಯಿಸುವು –

ದಿಲ್ಲ; ಬಿಡಿಸಿರಿ ಆಗ ನಿಮ್ಮನ್ನೂ ಬಿಡಿಸುವರು; ಕೊಡಿರಿ ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು.

ಯೇಸು ತನ್ನ ಅನುಯಾಯಿಗಳಿಗೆ 'ಕೊಡು'ವುದಕ್ಕೆ ಆಜ್ಞಾಪಿಸುತ್ತಾನೆ. ಉಚಿತವಾಗಿ ನೀಡುವ ಯಾರಿಗಾದರೂ ಹೇರಳವಾಗಿ ನೀಡಲಾಗುವುದು ಎಂದು ಅವರು ಭರವಸೆ ನೀಡುತ್ತಾರೆ.

ಮಾರ್ಕ 12:41–44:

ಯೇಸು ಬೊಕ್ಕಸದ ಮನೆಗೆ ಎದುರಾಗಿ ಕೂತುಕೊಂಡು ಜನರು ಬೊಕ್ಕಸದಲ್ಲಿ ಹಣ ಹಾಕುವುದನ್ನು ನೋಡುತ್ತಿದ್ದನು. ಅನೇಕ ಮಂದಿ ಐಶ್ವರ್ಯವಂತರು ಬಹಳ ಬಹಳ ಹಾಕುತ್ತಿರಲು ಒಬ್ಬ ಬಡವಿಧವೆ ಬಂದು ಎರಡು ಕಾಸು ಅಂದರೆ ಒಂದು ದುಗ್ಗಾಣಿ ಹಾಕಿದಳು. ಆಗ ಆತನು ತನ್ನ ಶಿಷ್ಯರನ್ನು ಹತ್ತಿರಕ್ಕೆ ಕರೆದು – ನಿಮಗೆ ನಿಜವಾಗಿ ಹೇಳುತ್ತೇನೆ, ಬೊಕ್ಕಸದಲ್ಲಿ ಹಾಕಿರುವವರೆಲ್ಲರಲ್ಲಿ ಈ ಬಡ ವಿಧವೆ ಹೆಚ್ಚು ಹಾಕಿದ್ದಾಳೆ. ಹೇಗಂದರೆ ಎಲ್ಲರೂ ತಮಗೆ ಸಾಕಾಗಿ ಮಿಕ್ಕದ್ದರಲ್ಲಿ ಹಾಕಿದರು; ಈಕೆಯೋ ತನ್ನ ಬಡತನ

– ದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದಳು, ತನ್ನ ಜೀವನವನ್ನೇ ಕೊಟ್ಟುಬಿಟ್ಟಳು ಅಂದನು.

ಈ ವಾಕ್ಯಭಾಗದ ಕಥೆಯನ್ನು ಓದಿದ ನಂತರ, ಈ ವಿಧಾನಗಳಲ್ಲಿ ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?
- ಕಥೆಯನ್ನು ಮತ್ತೆ ಹೇಳಿ ಅಥವಾ ಓದಿ.
- ಕಥೆಯನ್ನು ವಿವರಿಸುವ ನಾಟಕವನ್ನು ಮಾಡಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನ್ನು ಕಲಿತೆವು?
- ಮನುಷ್ಯರ ಬಗ್ಗೆ ನಾವು ಏನನ್ನು ಕಲಿತೆವು?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಕೆಳಗಿನವುಗಳು ಸಹಾಯಕವಾಗಬಹುದು.

ಕೆಳಗಿನವುಗಳನ್ನು ಚರ್ಚಿಸಿ:

- ದೇವರ ಉದ್ದೇಶಕ್ಕಾಗಿ ನಾವು ಏನು ಕೊಡಬೇಕು? ದೇವರ ಉದ್ದೇಶಕ್ಕಾಗಿ ನಾವು ನಮ್ಮ ಹಣ, ಸಮಯ, ಮತ್ತು ನಮ್ಮ ಜೀವಿತಗಳನ್ನೇ ನೀಡಬೇಕು.

- ದೇವರ ಉದ್ದೇಶಕ್ಕಾಗಿ ನಾವು ಏಕೆ ಕೊಡಬೇಕು? 2 ಕೊರಿಂಥ 9:6–8 ವಾಕ್ಯಳನ್ನು ಓದಿರಿ, ದೇವರ ಉದ್ದೇಶಗಳಿಗಾಗಿ ನಾವು ಹರ್ಷಚಿತ್ತದಿಂದ ಮತ್ತು ಉದಾರವಾಗಿ ನೀಡಬೇಕು.

- ದೇವರ ಉದ್ದೇಶಕ್ಕಾಗಿ ನಾವು ಹೇಗೆ ಕೊಡಬೇಕು? 2 ಕೊರಿಂಥ 9:6–8 ವಾಕ್ಯಳನ್ನು ಓದಿರಿ, ದೇವರ ಉದ್ದೇಶಗಳಿಗಾಗಿ ನಾವು ಉದಾರವಾಗಿ ನೀಡಬೇಕು ವಿನ, ಬಲವಂತದ ಅಡಿಯಲ್ಲಿ ಅಲ್ಲ. ಮತ್ತಾಯ 6:1–4 ಅನ್ನು ಓದಿರಿ. ನಾವು ರಹಸ್ಯವಾಗಿ ಕೊಡಬೇಕು, ಇತರ ಜನರ ಮಾನ್ಯತೆಗಾಗಿ ಅಲ್ಲ.

- ನಾವು ಯಾರಿಗೆ ಕೊಡುತ್ತೇವೆ?
  ಅಗತ್ಯವಿದ್ದರೆ, 2 ಕೊರಿಂಥ 8:1–9:15 ಮತ್ತು 1 ಕೊರಿಂಥ 16:1–4, ಗಲಾತ್ಯ 2:9–10 ಮತ್ತು ರೋಮಾ 15:25–32 ಈ ವಾಕ್ಯಗಳನ್ನು ಓದಿರಿ. ಯೆರುಸಲೇಮಿನಲ್ಲಿದ್ದ ಯೇಸುವಿನ ಬಡ ಅನುಯಾಯಿಗಳಿಗೆ ಬೆಂಬಲವಾಗಿ ಬಳಸಲು ಸಂಗ್ರಹವನ್ನು ಸಭೆಯಿಂದ ತೆಗೆದುಕೊಳ್ಳಲಾಗುತ್ತಿತ್ತು. ಹಾಗೆಯೇ, ಅ.ಕೃ. 4:32–37 ಓದಿರಿ. ಎಲ್ಲವೂ ಅವರಿಗೆ ಹುದುವಾಗಿತ್ತು ಮತ್ತು ಸಭೆಯು ಅವರವರ ಅಗತ್ಯಕ್ಕನನುಸಾರವಾಗಿ ಹಂಚುತ್ತಿತ್ತು.

## ಅಭ್ಯಾಸ ಮಾಡಿ

ಒಟ್ಟಿಗೆ ಸಂಗ್ರಹವನ್ನು ಹೇಗೆ ತೆಗೆದುಕೊಳ್ಳಬೇಕೆಂದು ಕಲಿಸಿ ಮತ್ತು ಅದನ್ನು ಮಾಡಿ. ದೇವರ ಉದ್ದೇಶಗಳನ್ನು ಮುನ್ನಡೆಸಲು ಹಣವನ್ನು ಹೇಗೆ ಬಳಸುವುದು ಎಂದು ಒಟ್ಟಿಗೆ ಚರ್ಚಿಸಿ.

# ಭಾಗ ಮೂರು
# ಮುಂದಾಗಿ ನೋಡುವುದು

## ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲವು ಮಾರ್ಗಗಳು ಕೆಳಕಂಡಂತಿರುತ್ತದೆ:

- ನಿಮ್ಮ ನೆರೆಹೊರೆಯವರಿಗೆ ಸಹಾಯ ಮಾಡುವ ಮೂಲಕ ಉದ್ದೇಶಪೂರ್ವಕವಾಗಿ ಪ್ರೀತಿಯನ್ನು ತೋರಿಸಲು ಸಮಯ ತೆಗೆದುಕೊಳ್ಳಿ.
- ಮಾರ್ಕ 12:41–44 ಈ ವಾಕ್ಯದಲ್ಲಿರುವ ಕಥೆಯನ್ನು ಹೇಳಿರಿ, ನಿಮ್ಮ ಕಥೆಯನ್ನೂ ದೇವರ ಕಥೆಯನ್ನೂ ಹೇಳಿರಿ.
- ಉದ್ದೇಶಪೂರ್ವಕವಾಗಿ ಇತರರನ್ನು ಪ್ರೀತಿಸಿರಿ.

- ಪ್ರತಿದಿನ ಪ್ರಾರ್ಥನೆ ಮಾಡಿರಿ ಮತ್ತು ಸತ್ಯವೇದವನ್ನೂ ಓದಿರಿ.

## ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಅಂತ್ಯಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.